ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ : 1271(1299)
2) ಸದಸ್ಯರ ಹೆಸರು : ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
3) ಉತ್ತರಿಸುವ ದಿನಾಂಕ : 23/09/2021
4) ಉತ್ತರಿಸುವ ಸಚಿವರ ಹೆಸರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕದಾದ್ಯಂತ ಕೆ.ಜಿ.ಐ.ಡಿ.ಯು ಹೊಂದಿರುವ ಸ್ಥಿರ ಮತ್ತು ಚರ ಆಸ್ತಿಗಳಾವುವು; (ಆಸ್ತಿವಾರು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)	ಸ್ಥಿರಾಸ್ತಿ ವಿವರಗಳನ್ನು ಅನುಬಂಧ-1 ರಲ್ಲಿ ಹಾಗೂ ಚರಾಸ್ತಿ ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.
ಆ)	ಈ ಆಸ್ತಿಗಳ ಸಂಬಂಧದಲ್ಲಿನ ತೆರಿಗೆಗಳನ್ನು ಕಾಲಕಾಲಕ್ಕೆ ಕರ ವಸೂಲಿ ಸಂಸ್ಥೆಗಳಿಗೆ ಪಾವತಿಸಲಾಗಿದೆಯೇ; (ಪಾವತಿಸಿರುವ ತೆರಿಗೆಗಳ ದಿನಾಂಕ ಮತ್ತು ಆಸ್ತಿಗಳವಾರು ವಿವರಗಳನ್ನು ಒದಗಿಸುವುದು);	ಪಾವತಿಸಿರುವುದಿಲ್ಲ.
ಇ)	ಕರಗಳನ್ನು ಪಾವತಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು;	ಮುನಿಸಿಪಲ್ ಸಂಖ್ಯೆ:6, ವಿಧಾನ ವೀದಿ ರಸ್ತೆ, ಸಂಪಂಗಿರಾಮನಗರ, ವಾರ್ಡ ನಂ.110 ರಲ್ಲಿರುವ ಪ್ರೆಸ್ ಕ್ಲಬ್ ಮತ್ತು ಮುನಿಸಿಪಲ್ ಸಂಖ್ಯೆ:6/1-1, ವಿಧಾನ ವೀದಿ ರಸ್ತೆ, ಸಂಪಂಗಿರಾಮನಗರ, ವಾರ್ಡ ನಂ.110 ರಲ್ಲಿರುವ ಮಾನ್ಯ ಉಚ್ಛ ನ್ಯಾಯಾಲಯದ ಕೆಲ ಕಛೇರಿಗಳಿರುವ ಅನೆಕ್ಸ್ ಕಟ್ಟಡದ ಆಸ್ತಿಗಳಿಗೆ ಆಸ್ತಿ ತೆರಿಗೆ ಪಾವತಿಸುವಂತೆ ಮೊದಲ ಬಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ದಿನಾಂಕ:16/09/2020 ರಂದು ನೋಟೀಸು ಸ್ವೀಕೃತವಾಗಿದ್ದು, ಸದರಿ ಸ್ವತ್ತುಗಳಿಗೆ ಯಾವುದೇ ಬಾಡಿಗೆ ನಿಗದಿಯಾಗದ ಕಾರಣ ಇಲಾಖೆಗೆ ಯಾವುದೇ ರೀತಿಯ ಆರ್ಥಿಕ ಲಾಭ ಇಲ್ಲದಿರುವುದರಿಂದ, ಆಸ್ತಿ ತೆರಿಗೆ ಪಾವತಿಸುವುದರಿಂದ ವಿನಾಯಿತಿ ನೀಡುವಂತೆ ದಿನಾಂಕ:06/04/2021ರಂದು ನಗರಾಭಿವೃದ್ಧಿ ಇಲಾಖೆಯನ್ನು ಕೋರಲಾಗಿದೆ.
ಈ)	ಯಾವಾಗ ಈ ಕರಗಳನ್ನು (ಆಸ್ತಿ ತೆರಿಗೆ ಮತ್ತು ಇತರೆ ಕರಗಳು) ಪಾವತಿಸಲಾಗಿದೆ?	ಅನ್ವಯಿಸುವುದಿಲ್ಲ.

ಸಂಖ್ಯೆ: ಆಇ 51 ಕವಿಇ 2021

(ಬಸವರಾಜ ಬೊಮ್ಮಾಯಿ)
ಮುಖ್ಯ ಮಂತ್ರಿ.

ಅನುಬಂಧ-1

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಗೆ ಸಂಬಂಧಿಸಿದ ಸ್ಥಿರಾಸ್ತಿಗಳ ವಿವರ ಈ ಕೆಳಕಂಡಂತಿದೆ:

ಕ್ರ ಸಂ.	ಜಿಲ್ಲೆ	ವಿಳಾಸ	ಸ್ವಂತ ಕಟ್ಟಡದ ವಿಸ್ತೀರ್ಣ
1	ಬೆಂಗಳೂರು	1. ಹಳೆಯ ಕೆ.ಜಿ.ಐ.ಡಿ. ಕಟ್ಟಡ (Main Building) 2. ಮುನಿಸಿಪಲ್ ಸಂಖ್ಯೆ.6, ವಿಧಾನವೀಧಿ ರಸ್ತೆ, ಸಂಪಂಗಿರಾಮನಗರ, ವಾರ್ಡ್ ನಂ.110. (ಪ್ರಸ್ತುತ ಪ್ರೆಸ್ ಕ್ಲಬ್ ಇರುವ ಕಟ್ಟಡ) 3. ಮುನಿಸಿಪಲ್ ಸಂಖ್ಯೆ.6/1-1, ವಿಧಾನ ವೀದಿ ರಸ್ತೆ, ಸಂಪಂಗಿರಾಮನಗರ, ವಾಡ್ ನಂ.110 (ಹಳೇ ಕೆ.ಜಿ.ಐ.ಡಿ ಅನೆಕ್ಸ್ ಕಟ್ಟಡ)	21023 ಚದರಡಿ 2614.98 ಚದರಡಿ 24615.15 ಚದರಡಿ
2	ಚಿಕ್ಕಮಗಳೂರು	ಸರ್ವೆ ನಂ.526, ಜಿಲ್ಲಾ ಪಂಚಾಯಿತಿ ಕಾರ್ಯಾಲಯದ ಹತ್ತಿರ, ಚಿಕ್ಕಮಗಳೂರು-577102.	18 ಗುಂಟೆ ನಿವೇಶನ, 4200 ಚದರಡಿ
3	ಹಾಸನ	ಸರ್ವೆ ನಂ.176, ಕುವೆಂಪು ನಗರ.	2074 ಚದರಡಿ
4	ರಾಯಚೂರು	ಸರ್ವೆ ನಂ.809, ರಾಯಚೂರು ನಗರ.	0.10 ಗುಂಟೆ ಜಾಗ
5	ಶಿವಮೊಗ್ಗ	ಆರ್.ಟಿ.ಓ ಆಫೀಸ್ ಹತ್ತಿರ, ಶಿವಮೊಗ್ಗ.	ನೆಲ ಮಹಡಿ - 361.80 ಚದರಡಿ ಮೊದಲ ಅಂತಸ್ತು - 361.80 ಚದರಡಿ
6	ಮೈಸೂರು	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದ ಸರ್ವೆ ನಂ.64/2.	ಖಾಲಿ ನಿವೇಶನ ಮಾತ್ರ, 891.88 ಚ.ಮೀ.
7	ಮಂಡ್ಯ	ಸರ್ವೆ ನಂ.153, ಮಂಡ್ಯ ತಾ., ಕಸಬಾ ಹೋಬಳಿ.	232.74 ಚದರಡಿ ಇರುವ 2 ಅಂತಸ್ತಿನ ಕಟ್ಟಡ
8	ಬಳ್ಳಾರಿ	ಟಿ.ಎಸ್ ನಂ.129, ವಾರ್ಡ್ ನಂ.1, ಬ್ಲಾಕ್ ನಂ.6, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ	50 x 100 ಚದರಡಿ ವಿಸ್ತೀರ್ಣದ ನಿವೇಶನದಲ್ಲಿ ನಿರ್ಮಿಸಿರುವ ಕಟ್ಟಡ.
9	ಬೆಳಗಾವಿ	ಜಿಲ್ಲಾಧಿಕಾರಿಗಳ ನಿವಾಸದ ಹತ್ತಿರ, ವಿಶ್ವೇಶ್ವರಯ್ಯ ನಗರ, ಬೆಳಗಾವಿ-590001.	2138 ಚದರಡಿ

ಸಂಖ್ಯೆ: ಆಇ 51 ಕವಿಇ 2021

ಅನುಬಂಧ-2

ಕರ್ನಾಟಕ ಸರ್ಕಾರಿ ವಿಮಾ ಇಲಾಖೆಗೆ ಸಂಬಂಧಿಸಿದ ಚರಾಸ್ತಿಗಳ ವಿವರ ಈ ಕೆಳಕಂಡಂತದೆ:

ಚರಾಸ್ತಿಗಳು	ಸಂಖ್ಯೆ
ಚಾಲ್ತಿ ಖಾತೆ ಸಂಖ್ಯೆ: 64043215364 ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಡಾ: ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು - 560 001.	01 ಖಾತೆ (ದಿನಾಂಕ:08/09/2021ರಲ್ಲಿದ್ದಂತೆ ರೂ.86,609.40)
ವಾಹನಗಳು	03
ಗಣಕ ಯಂತ್ರಗಳು / ಜೆರಾಕ್ಸ್ ಯಂತ್ರಗಳು / ಪ್ರಿಂಟರ್‌ಗಳು / ಸ್ಕ್ಯಾನರ್‌ಗಳು / ಯು.ಪಿ.ಎಸ್.	468
ಇತರೆ ಯಂತ್ರೋಪಕರಣಗಳು / ಪೀಠೋಪಕರಣಗಳು	5572

ಸಂಖ್ಯೆ: ಆಇ 51 ಕವಿಇ 2021